

ಶಾಂಕರ ಭಾಷ್ಯಸಮೇತ

# ಈಶಾವಾಸ್ಯ ಉಪನಿಷತ್ತು

ಸ್ವಾಮಿ ವೀರೇಶಾನಂದ



(ಮೂಲ, ಪದಾರ್ಥ, ಅನುವಾದ, ಶಂಕರಭಾಷ್ಯದ ಮೂಲ, ಶಂಕರಭಾಷ್ಯದ ಅನುವಾದ ಹಾಗೂ ಟಿಪ್ಪಣಿಗಳು)

## ಭಾಗ ೫

**ಭಾಷ್ಯ : ನ ಮಂತ್ರಾಣಾಂ ಜಾಮಿತಾ ಅಸ್ತಿ ಇತಿ ಪೂರ್ವಮಂತ್ರೋಕ್ತಮಪಿ ಅರ್ಥಂ ಪುನರಾಹ ।**

ವೈದಿಕ ಮಂತ್ರಗಳಲ್ಲಿ ಪುನರುಕ್ತಿಯ ದೋಷವಿಲ್ಲ. ಹೀಗಾಗಿ ಹಿಂದಿನ ಮಂತ್ರದಲ್ಲಿ ಈಗಾಗಲೇ ಹೇಳಿದ ವಿಷಯವನ್ನು ಮುಂದಿನ ಮಂತ್ರವು ಮತ್ತೆ ಪ್ರತಿಪಾದಿಸುತ್ತಿದೆ.

**ಟಿಪ್ಪಣಿಗಳು: ಪುನರುಕ್ತಿ ದೋಷ** : ಗ್ರಂಥಗಳಲ್ಲಿ, ಒಮ್ಮೆ ಹೇಳಿದ ವಿಷಯವನ್ನು ಮತ್ತೆ ಮತ್ತೆ ಪ್ರಸ್ತಾಪಿಸುವುದನ್ನು ಪುನರುಕ್ತಿ ಎಂದು ಕರೆಯುತ್ತಾರೆ. ಅದನ್ನು ಅನವಶ್ಯಕವಾಗಿ ಮಾಡಬಾರದು ಎನ್ನುವುದು ಸಂಪ್ರದಾಯದಲ್ಲಿ ಇರುವ ನಿಯಮ. ಆದರೆ ವೇದಗಳಲ್ಲಿ ಈ ಬಗೆಯ ದೋಷವಿಲ್ಲ ಎಂದು ಸಂಪ್ರದಾಯ ಪರಿಗಣಿಸುತ್ತದೆ. ಏಕೆಂದರೆ ವೇದಮಂತ್ರಗಳು ಅಪೌರುಷೇಯವಾದುವು; ಭಗವಂತನಿಂದಲೇ ಬಂದವು. ಅವುಗಳಲ್ಲಿ ಯಾವ ಬಗೆಯ ದೋಷವನ್ನೂ ಎತ್ತಿತೋರಿಸಲಾಗದು ಎನ್ನುವುದು ಸಾಂಪ್ರದಾಯಿಕವಾದ ನಂಬಿಕೆ. ಇದಲ್ಲದೆ ವೈದಿಕ ಮಂತ್ರಗಳು ಗಹನವಾದ ಅರ್ಥ ಉಳ್ಳವುಗಳು. ಉಪನಿಷತ್ತುಗಳಲ್ಲಿ ಬೋಧಿಸಿರುವ ಆತ್ಮತತ್ತ್ವವು ಅರಿತುಕೊಳ್ಳಲು ಅತ್ಯಂತ ಕಷ್ಟದಾಯಕ. ಹೀಗಾಗಿ ಸಾಧಕನ ಮನಸ್ಸಿನಲ್ಲಿ ಈ ವಿಷಯವನ್ನು ಆಳವಾಗಿ ಬೇರೂರಿಸುವ ಸಲುವಾಗಿ ಈ ಆತ್ಮತತ್ತ್ವವನ್ನು ಮತ್ತೆ ಮತ್ತೆ ಉಪದೇಶ ಮಾಡಲಾಗಿದೆ.

**ತದೇಜತಿ ತನ್ನೈಜತಿ ತದ್ದೂರೇ ತದ್ವಂತಿಕೇ ।**

**ತದಂತರಸ್ಯ ಸರ್ವಸ್ಯ ತದು ಸರ್ವಸ್ಯಾಸ್ಯ ಬಾಹ್ಯತಃ ॥ ೫ ॥**

**ತತ್** = ಅದು (ಆ ಆತ್ಮವು) **ಏಜತಿ** = ಚಲಿಸುವುದು. (ಇದೇ ಸಂದರ್ಭದಲ್ಲಿ) **ತತ್** = ಆ ಆತ್ಮವು **ನ ಏಜತಿ** = ಚಲಿಸುವುದಿಲ್ಲ. (ಹಾಗೆಯೇ) **ತತ್** = ಅದು **ದೂರೇ** = ದೂರದಲ್ಲಿದೆ. (ಮತ್ತು) **ತತ್** = ಅದು **ಅಂತಿಕೇ** = ಹತ್ತಿರದಲ್ಲಿಯೂ ಇದೆ. **ತತ್** = ಅದು **ಅಸ್ಯ ಸರ್ವಸ್ಯ** = ಈ ಇಡೀ ಜಗತ್ತಿನ **ಅಂತಃ** =ಒಳಗೆ ಇರುವುದು. **ತತ್ ಉ ಸರ್ವಸ್ಯ ಅಸ್ಯ ಬಾಹ್ಯತಃ** = ಅದು ಈ ಇಡೀ ಜಗತ್ತಿನ ಹೊರಗೂ ಇರುವುದು.

ಈ ಆತ್ಮವು ಚಲಿಸುವುದು. ಇದೇ ಸಂದರ್ಭದಲ್ಲಿ ಅದು ಚಲಿಸುವುದಿಲ್ಲ. ಹಾಗೆಯೇ ಈ ಆತ್ಮವು ದೂರದಲ್ಲಿದೆ; ಹತ್ತಿರದಲ್ಲಿಯೂ ಇದೆ. ಈ ಆತ್ಮವು ಈ ಅಖಂಡ ಜಗತ್ತಿನ ಒಳಗಿರುವುದು. ಹಾಗೆಯೇ ಇಡೀ ಜಗತ್ತಿನ ಹೊರಗೂ ಇರುವುದು.

**ಭಾಷ್ಯ : *ತತ್* ಆತ್ಮತತ್ತ್ವಂ ಯತ್ ಪ್ರಕೃತಮ್ *ಏಜತಿ* ಚಲತಿ ತದೇವ ಚ *ನ ಏಜತಿ* ಸ್ವತಃ ನೈವ ಚಲತಿ, ಸ್ವತಃ ಅಚಲಮೇವ ಸತ್ ಚಲತಿ ಏವ ಇತ್ಯರ್ಥಃ । ಕಿಂಚ, *ತದ್ದೂರೇ* ವರ್ಷಕೋಟಿಶತೈರಪಿ ಅವಿದುಷಾಮ್ ಅಪ್ರಾಪ್ಯತ್ವಾತ್ ದೂರ ಇವ । *ತತ್ ಉ ಅಂತಿಕೇ* ಸಮೀಪೇ ಅತ್ಯಂತಮೇವ ವಿದುಷಾಮ್, ಆತ್ಮತ್ವಾತ್ ನ ಕೇವಲಂ ದೂರೇ, ಅಂತಿಕೇ ಚ । *ತತ್ ಅಂತಃ* ಅಭ್ಯಂತರೇ *ಅಸ್ಯ ಸರ್ವಸ್ಯ*, 'ಯ ಆತ್ಮಾ ಸರ್ವಾಂತರಃ' ಇತಿ ಶ್ರುತೇಃ, ಅಸ್ಯ ಸರ್ವಸ್ಯ ಜಗತೋ ನಾಮರೂಪಕ್ರಿಯಾತ್ಮಕಸ್ಯ । *ತತ್ ಉ ಸರ್ವಸ್ಯ ಅಸ್ಯ ಬಾಹ್ಯತಃ*; ವ್ಯಾಪಿತ್ವಾತ್ ಆಕಾಶವತ್ ನಿರತಿಶಯಸೂಕ್ಷ್ಮತ್ವಾತ್ ಅಂತಃ ; 'ಪ್ರಜ್ಞಾನಘನ ಏವ' (ಬೃ. ಉ. ೪.೫. ೧೩) ಇತಿ ಶಾಸನಾತ್ ನಿರಂತರಂ ಚ ।**

**ತತ್** = ಆ ಆತ್ಮತತ್ತ್ವವು, ಅಂದರೆ ಈಗ ನಾವು ಸದ್ಯ ಅಧ್ಯಯನ ಮಾಡುತ್ತಿರುವ ಆತ್ಮತತ್ತ್ವವು **ಏಜತಿ** = ಚಲಿಸುತ್ತದೆ. ಅದೇ ಆತ್ಮತತ್ತ್ವವು **ನ ಏಜತಿ** = ಚಲಿಸುವುದಿಲ್ಲ, ಸ್ವತಃ ತಾನು ಚಲಿಸುವುದಿಲ್ಲ. ಸ್ವತಃ ತಾನು ಅಚಲವಾಗಿಯೇ ಇದ್ದುಕೊಂಡೇ ಚಲಿಸುತ್ತದೆ ಎಂದರ್ಥ. ಹಾಗೆಯೇ, **ತತ್** = ಆ ಆತ್ಮತತ್ತ್ವವು **ದೂರೇ** = ಆತ್ಮವನ್ನು ಅರಿಯದೆ ಇರುವವರಿಗೆ ನೂರಾರು ಕೋಟಿ ವರ್ಷಗಳಾದರೂ ದೊರಕದೆ ಇರುವುದರಿಂದ (ಯಾವತ್ತೂ) ದೂರದಲ್ಲಿಯೇ ಇರುತ್ತದೆ. **ತತ್ ಉ ಅಂತಿಕೇ** = ಆ ಆತ್ಮವು ಆತ್ಮಜ್ಞಾನಿ

ಗಳಿಗೆ ಅತ್ಯಂತ ಹತ್ತಿರವಾಗಿರುತ್ತದೆ. ಏಕೆಂದರೆ, ಅದು ಆತ್ಮಜ್ಞಾನಿಯ ಆತ್ಮವೇ (ಅಂತರ್ಗತ ಚೈತನ್ಯ) ಆಗಿದೆ. ಹೀಗಾಗಿ ಅದು ಅವನಿಗೆ ದೂರದಲ್ಲಿ ಇರುವುದಿಲ್ಲ. ಹತ್ತಿರದಲ್ಲಿಯೇ ಇರುತ್ತದೆ.

**ತತ್ ಅಂತಃ** = ಆ ಆತ್ಮತತ್ತ್ವವು ಇದೆಲ್ಲದರ (ಇಡೀ ಸೃಷ್ಟಿಯ) ಒಳಗೆ ತುಂಬಿಕೊಂಡಿದೆ. 'ಯ ಆತ್ಮಾ ಸರ್ವಾಂತರಃ' – (ಬೃಹದಾರಣ್ಯಕ ಉಪನಿಷತ್ತು, ೩.೪.೧) – 'ಈ ಆತ್ಮವು ಎಲ್ಲದರ ಒಳಗೂ ಇದೆ' ಎಂದು ಶ್ರುತಿಯು ಹೇಳುತ್ತದೆ. **ಅಸ್ಯ ಸರ್ವಸ್ಯ** = ನಾಮ–ರೂಪ–ಕ್ರಿಯೆಗಳೇ ತನ್ನ ಸ್ವರೂಪವಾಗಿರುವ ಇಡೀ ಜಗತ್ತಿನ ಒಳಗೆ (ಎಲ್ಲೆಲ್ಲಿಯೂ) ಇದೆ ಎಂದರ್ಥ. **ತತ್ ಉ ಸರ್ವಸ್ಯ ಅಸ್ಯ ಬಾಹ್ಯತಃ** = ಆ ಆತ್ಮತತ್ತ್ವವು ಇದೆಲ್ಲದರ ಹೊರಗೂ ಇದೆ. ಏಕೆಂದರೆ ಇದು ಆಕಾಶದಂತೆ ವ್ಯಾಪಕವಾದದ್ದು, ಎಲ್ಲಕ್ಕಿಂತಲೂ ಸೂಕ್ಷ್ಮವಾದದ್ದು. 'ಪ್ರಜ್ಞಾನಘನ ಏವ' (ಬೃಹದಾರಣ್ಯಕ ಉಪನಿಷತ್ತು,೪.೫.೧೩) ಎಂಬ ಉಪನಿಷತ್ತಿನ ಉಪದೇಶದಂತೆ, ಆತ್ಮತತ್ತ್ವವು ಯಾವುದೇ ಅಂತರವಿಲ್ಲದ್ದೂ ಆಗಿದೆ (ಅಂದರೆ ನಿರಂತರವಾಗಿ ಎಲ್ಲ ಕಡೆ ಇದ್ದುಕೊಂಡಿದೆ).

**ಟಿಪ್ಪಣಿಗಳು: ತತ್ ಉ ಅಂತಿಕೇ** = ಆತ್ಮಜ್ಞಾನಿಗಳಿಗೆ ಆತ್ಮವು ಬಹಳ ಹತ್ತಿರದಲ್ಲಿಯೇ ಇರುತ್ತದೆ ಎಂದು ಉಪನಿಷತ್ತು ಸಾಂಕೇತಿಕ ರೂಪದಲ್ಲಿ ಉಪದೇಶಿಸುತ್ತದೆ. ಈ ಗಹನ ವಿಷಯವನ್ನು ಶ್ರೀಶಂಕರಾಚಾರ್ಯರು ಮನೋಜ್ಞವಾಗಿ ವಿವರಿಸುತ್ತಾರೆ. ಪ್ರತಿಯೊಬ್ಬ ವ್ಯಕ್ತಿಯ ದೇಹ, ಮನಸ್ಸು, ಬುದ್ಧಿಗಳಿಗೆ ಚೈತನ್ಯದ ಬೆಳಕನ್ನು ನೀಡುತ್ತಿರುವ, ಒಬ್ಬನ ವ್ಯಕ್ತಿತ್ವದ ಸ್ವರೂಪವೇ ಆತ್ಮ. ಅಂಥ ಚೈತನ್ಯ ಸ್ವರೂಪವೇ ನಾನು ಎಂದು ಆತ್ಮಜ್ಞಾನಿಯು ತಿಳಿದುಕೊಂಡಿರುತ್ತಾನೆ. ಹೀಗಾಗಿ ಆತ್ಮವು ಬೇರೆಯಲ್ಲ, ಆತ್ಮಜ್ಞಾನಿಯು ಬೇರೆಯಲ್ಲ. ಆತ್ಮಕ್ಕಿಂತ ಹತ್ತಿರವಾಗಿ ಬೇರೇನೂ ಇರಲು ಸಾಧ್ಯವಿಲ್ಲ. ಆದ್ದರಿಂದ ಉಪನಿಷತ್ತು ಒಗಟಿನ ಭಾಷೆಯಲ್ಲಿ ಆತ್ಮವು ಹತ್ತಿರದಲ್ಲಿದೆ ಎಂದು ಹೇಳುತ್ತದೆ.

**ಯಸ್ತು ಸರ್ವಾಣಿ ಭೂತಾನಿ ಆತ್ಮನ್ಯೇವಾನುಪಶ್ಯತಿ ।**
**ಸರ್ವಭೂತೇಷು ಚಾತ್ಮಾನಂ ತತೋ ನ ವಿಜುಗುಪ್ಸತೇ ॥ ೬ ॥**

**ಯಃ ತು** = ಯಾವನು **ಸರ್ವಾಣಿ ಭೂತಾನಿ** = ಎಲ್ಲ ಭೂತಗಳನ್ನು **ಆತ್ಮನಿ** = ಆತ್ಮನಲ್ಲಿಯೇ **ಅನುಪಶ್ಯತಿ** = ನೋಡುತ್ತಾನೆಯೋ, **ಚ** = ಹಾಗೆಯೇ **ಸರ್ವಭೂತೇಷು** = ಎಲ್ಲ ಭೂತಗಳಲ್ಲಿಯೂ **ಆತ್ಮಾನಂ** = ತನ್ನ ಆತ್ಮವನ್ನೇ ನೋಡುತ್ತಾನೆಯೋ **ತತಃ** = ಈ ಕಾರಣದಿಂದಾಗಿ, (ಅವನು) **ನ ವಿಜುಗುಪ್ಸತೇ** = ಯಾರಲ್ಲಿಯೂ ದ್ವೇಷವನ್ನು ಹೊಂದುವುದಿಲ್ಲ.

ಯಾವನು ಎಲ್ಲ ಜೀವಿಗಳನ್ನು ತನ್ನ ಆತ್ಮನಲ್ಲಿಯೇ ನೋಡುತ್ತಾನೆಯೋ, ಹಾಗೆಯೇ, ಎಲ್ಲ ಜೀವಿಗಳಲ್ಲಿ ತನ್ನ ಆತ್ಮವನ್ನೇ ಕಾಣು ತ್ತಾನೆಯೋ, ಈ ಕಾರಣದಿಂದಾಗಿ, ಅವನು ಯಾರಲ್ಲಿಯೂ ದ್ವೇಷವನ್ನು ಹೊಂದುವುದಿಲ್ಲ.

**ಭಾಷ್ಯ : ಯಸ್ತು ಪರಿವ್ರಾಟ್ ಮುಮುಕ್ಷುಃ *ಸರ್ವಾಣಿ ಭೂತಾನಿ* ಅವ್ಯಕ್ತಾದೀನಿ ಸ್ಥಾವರಾಂತಾನಿ *ಆತ್ಮನ್ಯೇವ ಅನುಪಶ್ಯತಿ*, ಆತ್ಮವ್ಯತಿರಿಕ್ತಾನಿ ನ ಪಶ್ಯತಿ ಇತ್ಯರ್ಥಃ । *ಸರ್ವಭೂತೇಷು* ತೇಷ್ವೇವ ಚ *ಆತ್ಮಾನಂ* ತೇಷಾಮಪಿ ಭೂತಾನಾಂ ಸ್ವಮಾತ್ಮಾನಮ್ ಆತ್ಮತ್ವೇನ । ಯಥಾ ಅಸ್ಯ ದೇಹಸ್ಯ ಕಾರ್ಯಕರಣಸಂಘಾತಸ್ಯ ಆತ್ಮಾ ಅಹಂ ಸರ್ವಪ್ರತ್ಯಯಸಾಕ್ಷಿಭೂತಃ ಚೇತಯಿತಾ ಕೇವಲೋ ನಿರ್ಗುಣಃ, ಅನೇನೈವ ಸ್ವರೂಪೇಣ ಅವ್ಯಕ್ತಾದೀನಾಂ ಸ್ಥಾವರಾಂತಾನಾಮ್ ಅಹಮೇವ ಆತ್ಮಾ ಇತಿ ಸರ್ವಭೂತೇಷು ಚ ಆತ್ಮಾನಂ ನಿರ್ವಿಶೇಷಂ ಯಃ ತು ಅನುಪಶ್ಯತಿ, ಸಃ *ತತಃ* ತಸ್ಮಾದೇವ ದರ್ಶನಾತ್ *ನ ವಿಜುಗುಪ್ಸತೇ* ವಿಜುಗುಪ್ಸಾಂ ಘೃಣಾಂ ನ ಕರೋತಿ । ಪ್ರಾಪ್ತಸ್ಯ ಏವ ಅನುವಾದಃ ಅಯಮ್ । ಸರ್ವಾ ಹಿ ಘೃಣಾ ಆತ್ಮನಃ ಅನ್ಯದ್ ದುಷ್ಟಂ ಪಶ್ಯತಃ ಭವತಿ; ಆತ್ಮಾನಮೇವ ಅತ್ಯಂತ ವಿಶುದ್ಧಂ ನಿರಂತರಂ ಪಶ್ಯತಃ ನ ಘೃಣಾನಿಮಿತ್ತಮ್ ಅರ್ಥಾಂತರಮ್ ಅಸ್ತೀತಿ ಪ್ರಾಪ್ತಮೇವ । ತತಃ ನ ವಿಜುಗುಪ್ಸತ ಇತಿ ।**


**ಯಃ ತು** = ಯಾವನು ಅಂದರೆ ಪರಿವ್ರಾಜಕ ಸಂನ್ಯಾಸಿಯಾದ ಮುಮುಕ್ಷುವು **ಸರ್ವಾಣಿ ಭೂತಾನಿ** = ಎಲ್ಲ ಭೂತಗಳನ್ನು ಅಂದರೆ ಅವ್ಯಕ್ತದಿಂದ ಹಿಡಿದು ಸಸ್ಯವರ್ಗಗಳ ತನಕ ಎಲ್ಲವನ್ನೂ **ಆತ್ಮನ್ಯೇವ ಅನುಪಶ್ಯತಿ** = ಆತ್ಮನಲ್ಲಿಯೇ ನೋಡುತ್ತಾನೆಯೋ. ಇದರ ಅರ್ಥ ಅವನು ಆತ್ಮಕ್ಕಿಂತ ಬೇರೆ ಏನನ್ನೂ ನೋಡುವುದಿಲ್ಲ ಎಂದು. **ಸರ್ವಭೂತೇಷು** = ಎಲ್ಲ ಭೂತಗಳಲ್ಲಿ, ಅಂದರೆ ಹಿಂದೆ ಹೇಳಿರುವ ಎಲ್ಲ ಭೂತಗಳಲ್ಲಿ **ಆತ್ಮಾನಂ** = ಆತ್ಮವನ್ನೇ ನೋಡುತ್ತಾನೆಯೋ. ಅಂದರೆ, ಅವುಗಳೆಲ್ಲವನ್ನೂ ತನ್ನ ಆತ್ಮವೆಂದೇ ನೋಡುತ್ತಾನೆಯೋ ಅವನು. ಅದು ಹೇಗೆಂದರೆ, ಕಾರ್ಯಕರಣಸಂಘಾತವಾದ ( ಕಾರ್ಯ ಎಂದರೆ ಸ್ಥೂಲದೇಹ. ಕರಣ ಎಂದರೆ ಇಂದ್ರಿಯಗಳು. ಇವುಗಳ ಒಕ್ಕೂಟವೇ ನಮ್ಮ ದೇಹ) ಈ ದೇಹದ ಆತ್ಮವಾದ ನಾನು ಎಲ್ಲ ಅನುಭವಗಳ ಸಾಕ್ಷಿರೂಪನಾಗಿದ್ದೇನೆ, ಚೈತನ್ಯದ ಮೂಲಸೆಲೆಯಾಗಿದ್ದೇನೆ, ಪರಿಶುದ್ಧ ಸ್ವರೂಪನು, ನಿರ್ಗುಣನು ಎಂದು ಅವನು ಹೇಗೆ ಕಂಡುಕೊಳ್ಳುತ್ತಾನೆಯೋ, ಅದೇ ರೀತಿ — ಅದೇ ಆತ್ಮಸ್ವರೂಪದ ಭಾವನೆಯಿಂದಲೇ — ಅವ್ಯಕ್ತದಿಂದ ಹಿಡಿದು ಸಸ್ಯವರ್ಗಗಳವರೆಗೆ ಇರುವ ಎಲ್ಲ ಭೂತಗಳ ಆತ್ಮವು ನಾನೇ ಆಗಿದ್ದೇನೆ ಎಂದು ಯಾವ ಗುಣಗಳೂ ಇಲ್ಲದ ಆತ್ಮನನ್ನು ನೋಡುತ್ತಾನೆ. **ತತಃ** = ಇದರಿಂದಲೇ, ಈ ಬಗೆಯ ದರ್ಶನದಿಂದಲೇ, ಅವನು **ನ ವಿಜುಗುಪ್ಸತೇ** = ಜುಗುಪ್ಸೆಯನ್ನು ಅಂದರೆ ದ್ವೇಷವನ್ನು ಹೊಂದುವುದಿಲ್ಲ.

ಜಗತ್ತಿನಲ್ಲಿ ಕಂಡುಬರುವ ವಾಸ್ತವದ ಮರುಹೇಳಿಕೆಯೇ ಇದಾಗಿದೆ. ಎಲ್ಲ ರೀತಿಯ ದ್ವೇಷಭಾವನೆಯು ಆತ್ಮನಿಗಿಂತ ಅಥವಾ ತನಗಿಂತ ಭಿನ್ನವಾದ ಯಾವುದೋ ದುಷ್ಟ ವ್ಯಕ್ತಿ ಅಥವಾ ವಸ್ತುವನ್ನು ನೋಡಿ ಉಂಟಾಗುತ್ತದೆ. ಇದಕ್ಕೆ ಬದಲಾಗಿ ಅತ್ಯಂತ ಪರಿಶುದ್ಧವಾದ, ಎಲ್ಲೆಲ್ಲಿಯೂ ಇರುವ ಆತ್ಮವನ್ನೇ ನೋಡುತ್ತಿರುವವನಿಗೆ ದ್ವೇಷಕ್ಕೆ ಕಾರಣವಾದ ಅರ್ಥಾಂತರ, ಅಂದರೆ ಬೇರೆ ವಸ್ತುವಾಗಲಿ, ವ್ಯಕ್ತಿಯಾಗಲಿ ಕಾಣಬರುವುದೇ ಇಲ್ಲ. ಇದು ಅನುಭವಕ್ಕೆ ಬರುವ ವಿಷಯವೇ ಆಗಿದೆ. ಹೀಗಾಗಿ ಅಂಥ ದರ್ಶನವನ್ನು ಪಡೆದುಕೊಂಡವನು ಯಾರನ್ನೂ ದ್ವೇಷಿಸುವುದಿಲ್ಲ.

**ಟಿಪ್ಪಣಿಗಳು: ಸರ್ವಾತ್ಮಭಾವ** : ಈ ಮಂತ್ರವು ಅತ್ಯಂತ ಮಹತ್ವವಾದ ಮಂತ್ರ. ಇಲ್ಲಿ ಆತ್ಮಜ್ಞಾನಿಯ ನೆಲೆಯನ್ನು ಎರಡು ದೃಷ್ಟಿಕೋನಗಳಿಂದ ವಿವರಿಸಲಾಗಿದೆ. ಅವನು ಇಡೀ ಸೃಷ್ಟಿಯನ್ನು ತನ್ನ ಆತ್ಮದಲ್ಲಿಯೇ ನೋಡುತ್ತಾನೆ. ಅಂದರೆ, ಶ್ರೀಶಂಕರಾಚಾರ್ಯರು ವಿವರಿಸುವಂತೆ, ಅವನ ಆತ್ಮವು ದೇಹ, ಮನಸ್ಸುಗಳಿಗೆ ಸೀಮಿತವಾಗಿಲ್ಲ. ಈ ಅಸ್ತಿತ್ವದ ಸಕಲ ಭೂತಗಳು ಅವನ ಆತ್ಮನ ಪರಿಧಿಯಲ್ಲಿ ಬರುತ್ತವೆ. ಆತ್ಮದ ನಿಜವಾದ ಅನಂತಸ್ವರೂಪದ ಅನುಭವ ಅವನಿಗೆ ಆಗುತ್ತದೆ. ಇನ್ನೊಂದು ದೃಷ್ಟಿಕೋನವೆಂದರೆ, ಆತ್ಮಜ್ಞಾನಿಯು ಎಲ್ಲ ಭೂತಗಳಲ್ಲಿ, ಅಂದರೆ ಅವ್ಯಕ್ತದಿಂದ ಹಿಡಿದು ಸಸ್ಯವರ್ಗದವರೆಗೆ, ಎಲ್ಲರಲ್ಲಿಯೂ ತನ್ನ ಆತ್ಮವನ್ನೇ ನೋಡುತ್ತಾನೆ. ಇದರ ಅರ್ಥ ಆತ್ಮನಿಗಿಂತ ಭಿನ್ನವಾಗಿ ಅವನಿಗೆ ಏನೂ ಕಾಣಬರುವುದಿಲ್ಲ. ವಿವಿಧ ಜೀವಜಂತುಗಳೆಂಬುದು ವಿಶ್ವವ್ಯಾಪಕವಾದ ಆತ್ಮನ ಉಪಾಧಿಗಳು ಅಷ್ಟೇ. ಅವಿದ್ಯೆಯ ಕಾರ್ಯವಾದ ಉಪಾಧಿಯ ದೃಷ್ಟಿಯನ್ನು ಮೀರಿ ನೋಡಿದಾಗ, ಯಾವ ಚೈತನ್ಯಮಯ ಆತ್ಮವು ನಾನಾಗಿದ್ದೇನೆಯೋ, ಎಲ್ಲ ಜೀವಿಗಳೂ ಅದೇ ಆತ್ಮದ ಅನೇಕ ಬಗೆಯ ಉಪಾಧಿರೂಪಗಳು ಮಾತ್ರವೇ; ಅವುಗಳೆಲ್ಲದರ ಅಂತಸ್ಸತ್ವ ತನ್ನ ಆತ್ಮವೇ ಎಂದು ಆತ್ಮಜ್ಞಾನಿಗೆ ವೇದ್ಯವಾಗುತ್ತದೆ. ಎಲ್ಲವೂ ಆಗುವ ಈ ಪರಮಾನುಭವವನ್ನು ಬೃಹದಾರಣ್ಯಕ ಉಪನಿಷತ್ತು 'ಸರ್ವಾತ್ಮಭಾವ' ಎಂದು ಬಣ್ಣಿಸುತ್ತದೆ.

*(ಮುಂದುವರಿಯುವುದು)*

**ಯುವಚೇತನ**



## ಧ್ಯಾನಶಕ್ತಿ

ಧ್ಯಾನಶಕ್ತಿ ನಮಗೆ ಏನನ್ನು ಬೇಕಾದರೂ ಕೊಡಬಲ್ಲದು. ನಿಮಗೆ ಪ್ರಕೃತಿಯ ಮೇಲೆ ಸ್ವಾಧೀನ ಬೇಕಾದರೆ ಧ್ಯಾನದಿಂದ ಇದನ್ನು ಪಡೆಯಬಹುದು. ಧ್ಯಾನಶಕ್ತಿಯಿಂದಲೇ ಇಂದಿನ ವೈಜ್ಞಾನಿಕ ವಿಷಯಗಳನ್ನೆಲ್ಲಾ ಕಂಡುಹಿಡಿದಿರುವುದು. ಅವರು ವಿಷಯವನ್ನು ಅಧ್ಯಯನ ಮಾಡುವರು. ಬೇರೆ ಎಲ್ಲವನ್ನೂ, ತಮ್ಮ ದೇಹವನ್ನೂ ಮರೆಯುತ್ತಾರೆ. ಅನಂತರ ಸತ್ಯ ಮಿಂಚಿನಂತೆ ಹೊಳೆಯುತ್ತದೆ. ಕೆಲವರು ಅದನ್ನು ಸ್ಫೂರ್ತಿ ಎನ್ನುತ್ತಾರೆ. ಅದು ಬರೀ ಸ್ಫೂರ್ತಿ ಮಾತ್ರವಲ್ಲ ಅದರ ಹಿಂದೆ ಶ್ರಮವೂ ಇತ್ತು. ಈ ಪ್ರಪಂಚದಲ್ಲಿ ಬೆಲೆಯಿಲ್ಲದೆ ಯಾವುದೂ ಎಂದಿಗೂ ದೊರಕಿಲ್ಲ.

ಮುಕ್ತಾತ್ಮನ ಮೇಲೆ ಧ್ಯಾನಿಸುವುದರಿಂದ ಅಥವಾ ಜೀವನದ ಸಾಮರಸ್ಯದ ಮೇಲೆ ಧ್ಯಾನಿಸುವುದರಿಂದ ಇದೇ ಪ್ರತಿಫಲವನ್ನು ಪಡೆಯಬಹುದು. ಇವುಗಳನ್ನೇ ವಸ್ತುಧ್ಯಾನ ಎನ್ನುವುದು. ನೀವು ಕೆಲವು ಬಾಹ್ಯವಸ್ತುಗಳ ಮೇಲೆ ಒಳಗೋ ಅಥವಾ ಹೊರಗೋ ಧ್ಯಾನಿಸುವುದನ್ನು ಪ್ರಾರಂಭಿಸುತ್ತೀರಿ. ನೀವು ಒಂದು ದೊಡ್ಡ ವಾಕ್ಯವನ್ನು ತೆಗೆದುಕೊಂಡರೆ ಅದು ಧ್ಯಾನವಲ್ಲ. ಅದು ಕೇವಲ ಮನಸ್ಸನ್ನು ಕೇಂದ್ರೀಕರಿಸಲು ಸಹಾಯ ಮಾಡಬಹುದು. ಧ್ಯಾನ ಎಂದರೆ ಮನಸ್ಸು ಕೇವಲ ತನ್ನ ಮೇಲೆಯೇ ಕುರಿತು ಚಿಂತಿಸುವುದು. ಚಿತ್ತ ಯಾವಾಗ ವೃತ್ತಿಗಳನ್ನು ನಿಗ್ರಹಿಸುವುದೋ, ಆಗ ಪ್ರಪಂಚವೂ ನಿಂತಂತೆ. ನಿಮ್ಮ ಚೈತನ್ಯ ವಿಕಾಸವಾಗುವುದು. ನೀವು ಧ್ಯಾನಿಸಿದಷ್ಟೂ ಮುಂದುವರಿಯುತ್ತಾ ಹೋಗುವಿರಿ. ಕಷ್ಟಪಟ್ಟು ಅಭ್ಯಾಸವನ್ನು ಮಾಡುತ್ತಾ ಹೋಗಿ. ಧ್ಯಾನ ಸಿದ್ಧಿಸುವುದು. ನಿಮಗೆ ದೇಹ ಅಥವಾ ಮತ್ತೆ ಯಾವ ಭಾವನೆಯೂ ಇರುವುದಿಲ್ಲ. ನೀವು ಒಂದು ಗಂಟೆ ಧ್ಯಾನಮಾಡಿ ಆದ ಮೇಲೆ ನಿಮಗೆ ನಿಮ್ಮ ಜೀವನದಲ್ಲೇ ಇದುವರೆಗೆ ಸಿಕ್ಕದ ವಿಶ್ರಾಂತಿಯು ಲಭಿಸುವುದು. ನಿಮ್ಮ ದೇಹಕ್ಕೆ ಕೊಡುವ ಏಕಮಾತ್ರ ವಿಶ್ರಾಂತಿಯೇ ಇದು. ಮನಸ್ಸು ಗಾಢವಾದ ನಿದ್ರಾವಸ್ಥೆಯಲ್ಲೂ ಚಂಚಲವಾಗಿರುವುದು. ಧ್ಯಾನದ ಕೆಲವು ನಿಮಿಷಗಳಲ್ಲಿ ಅದು ಸ್ತಬ್ಧವಾಗುವುದು. ಎಲ್ಲೋ ಸ್ವಲ್ಪ ಮಾತ್ರ ಸ್ಪಂದನ ಇರುವುದು. ಆಗ ನಿಮಗೆ ದೇಹಭಾವ ಮಾಯವಾಗುವುದು. ನಿಮ್ಮನ್ನು ಚೂರು ಚೂರು ಮಾಡಿದರೂ ಅದು ನಿಮಗೆ ಆಗ ಗೊತ್ತಾಗುವುದಿಲ್ಲ. ನಿಮಗೆ ಧ್ಯಾನದಲ್ಲಿ ಅಂತಹ ಆನಂದ ದೊರಕುವುದು. ನೀವಾಗ ಅಷ್ಟು ಹಗುರವಾಗುವಿರಿ. ಇಂತಹ ಪರಿಪೂರ್ಣವಾದ ವಿಶ್ರಾಂತಿಯು ಧ್ಯಾನದಿಂದ ಲಭಿಸುವುದು.

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೬, ಪು. ೨೦೦, ಮತ್ತು ೨೦೪-೫)*